(SRI G. A. THIMMAPPA GOWDA) Town are requesting them for supply of water to their town from Hemavathi river for the last 5 or 6 years;

(*b*) the action taken by them to implement this long felt need of the people?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The estimate has not been received by Government yet. The capacity of the Municipality to repay the loan will have to be examined.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಂದಾಜು ಸರ್ಕಾರಕ್ಕೆ ಇನ್ನೂ ಬಂದಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಈ ಅಂದಾಜು ಯಾವುದು?

ಶ್ರೀ ಟಿ. ಚನ್ನಯ್ಯ.—ಹೇಮಾವತಿ ನದಿಯ ನೀರನ್ನು ತಂದು ಅರಕಲಗೂಡು ಟೌನಿಗೆ ಸರಬರಾಯಿ ಮಾಡೆ ತಕ್ಕ ಬಗ್ಗೆ ಒಂದು ಹೊಸ ಅಂದಾಜನ್ನು ತಯಾರಿಸಿ ಅದನ್ನು ಚೀಫ್ ಇಂಜಿನಿಯರ್ ಅವರಿಗೆ ಕಳುಹಿಸಿ ಕೊಡಲಾಗಿದೆ. ಅವರಿಂದ ಇನ್ನೂ ಅದು ಪರಿಶೀಲನೆ ಯಾಗಿ ಬಂದಿಲ್ಲ. ಅದರಿಂದ ಈ ಕೆಲಸ ಈಗ ನಿಧಾನ ವಾಗಲು ಕಾರಣವಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ತಾಲ್ಲೂಕು ಹೆಡ್‌ಕ್ವಾರ್ಟರಿಗೆ ಬೇಸಿಗೆಯ ಕಾಲದಲ್ಲಿ ಈ ಕುಡಿಯುವ ನೀರಿನ ಅಭಾವ ತುಂಬ ಇರುತ್ತದೆ ಅಂತ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಹಾಗೆ ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದುದರಿಂದಲೇ ಸರ್ಕಾರದವರು ಅಷ್ಟೊಂದು ಮೊಬಲಗನ್ನು ಕೊಟ್ಟುಮೊದಲು ಬಾವಿಗಳನ್ನು ತೋಡಿಸಲು ಏರ್ಪಾಡು ಮಾಡಿದ್ದು. ಆದರೆ ಈಗ ಆ ಬಾವಿಯಿಂದ ಸರಬರಾಯಿಯಾಗತಕ್ಕ ನೀರು ಸಾಲದೆ ಬರುತ್ತದೆಂದು ಟೌನಿನ ಜನರು ಮತ್ತೊಂದು ರಿಪೋರ್ಟನ್ನು ಸರ್ಕಾರಕ್ಕೆ ಕಳುಹಿಸಿದರು. ಆಗ ನಾವು ಇದಕ್ಕೆ ಆ ನದಿಯಿಂದ ನೀರಿನ ಸರಬರಾಯಿ ಮಾಡಲು ಹೊಸದಾಗಿ ಒಂದು ಅಂದಾಜನ್ನು ತಯಾರು ಮಾಡಿಸಿದ್ದೇವೆ. ಆದರೆ ಮೊದಲು ಜನರು ಆ ಬಾವಿಗಳಿಂದ ಬರುವ ನೀರು ಸಾಕಾಗುತ್ತದೆಂದು ಹೇಳಿದ್ದರು. ಅದಕ್ಕಾಗಿ ಬಾವಿಗಳಿಗೆ 18 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದೆವು. ಈಗ ಸಾಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ಹೊಸ ಪ್ರಯತ್ನವನ್ನು ಕೈಕೊಳ್ಳಲಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇದಕ್ಕೆ ನೀರನ್ನು ಬೇರೆ ಇನ್ನಾವ ಸುಲಭೋಪಾಯದ ಮಾರ್ಗದಿಂದಲೂ ಸರಬರಾಯಿ ಮಾಡುವುದಕ್ಕಾಗದೆ ಇರುವುದರಿಂದ ಈ ಮುನಿಸಿಪಾಲಿಟಿಗೆ ಸ್ವಲ್ಪ ಹಣಕಾಸಿನ ವ್ಯವಸ್ಥೆ ಸಾಕಷ್ಟು ಇಲ್ಲದಿದ್ದರೂ ತಾವೇ ಇದನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಈಗ ತಯಾರಿಸಿರುವ ಅಂದಾಜಿಗೆ 4 ಲಕ್ಷ 84 ಸಾವಿರ ರೂಪಾಯಿಗಳು ಬೇಕಾಗುತ್ತವೆಂದು ತಿಳಿದು ಬಂದಿದೆ. ಚೀಫ್ ಇಂಜಿನಿಯರ್ ಅವರಿಂದ ಅಂದಾಜು ಪರಿಶೀಲನೆ ಆಗಿ ಬಂದನಂತರ ಆ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡಲಾಗುತ್ತದೆ.

Sagar Town Municipality (acquisition of land for extension of Town.)

Q.—866. Sri S. GOPALA GOWDA (Sagar-Hosanagar).—

Will the Government be pleased to state:—

(*a*) since how long the alienation proceeding of the Sagar Town Municipality to acquire lands round about the town for the purpose of building houses is pending before the Government;

(*b*) whether it has come to their notice that nearly 800 houses have been constructed unauthorisedly;

(*c*) whether they would consider the question of disposing of these areas without any further delay?

A.—Sri T. CHANNIAH (Minister for Public Health and Local Self-Government).—

(*a*) The matter is not pending before Government.

(*b*) No.

(*c*) Yes.

ಶ್ರೀ ಎಸ್. ಗೋಪಾಲಗೌಡ.—ಈ ವಿಷಯದಲ್ಲಿ ಸರ್ಕಾರಕ್ಕೆ ಸಾಗರ ಪೌರನಭೆಯವರಿಂದ ಯಾವ ಕಾಗದ ಪತ್ರವೂ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಬಂದಿದೆ. ಆದರೆ ಅಲ್ಲಲ್ಲಿ ಅಕ್ರಮವಾಗಿ ಮತ್ತು ಅನಧಿಕೃತವಾಗಿ ಕಟ್ಟಿರತಕ್ಕ ಮನೆಗಳನ್ನು ತೆಗೆದುಹಾಕಿಸಲು ಸ್ಥಳೀಯ ಸರ್ಕಾರದವರು ಸೂಕ್ತಕಾರ್ಯಕ್ರಮವನ್ನು ಈ ಬಗ್ಗೆ ಕೈಗೊಳ್ಳಬೇಕೆಂದು ಅವರಿಗೆ ಸರ್ಕಾರದವರು ಕೈಗೊಂಡಿರುವ ತೀರ್ಮಾನವನ್ನು ತಿಳಿಸಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಹಾಗೆ ಅನಧಿಕೃತವಾಗಿ ಕಟ್ಟಿರತಕ್ಕ ವಿಚಾರ ಯಾವುದೂ ಸರ್ಕಾರದವರ ಗಮನಕ್ಕೆ ಬಂದಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದು ಈಗತಾನೆ ತಾವು ಕೊಟ್ಟಿರತಕ್ಕ ಉತ್ತರದ ಪ್ರಕಾರ ಆ ಮನೆಗಳನ್ನು ಕಿತ್ತು ಹಾಕಿಸಲು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸ್ಥಳೀಯ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಹೇಳಿದಿರಿ. ಆ ರೀತಿಯಾಗಿ ಆ ಮನೆಗಳನ್ನು ಕೀಳಿಸಬೇಕೆಂದು ಹೇಳುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ತಾವು 800 ಮನೆಗಳನ್ನು ಅನಧಿಕೃತವಾಗಿ ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೀರಿ. ಆದರೆ ಅಲ್ಲಿ ಅರೀತಿ ಅನಧಿಕೃತವಾಗಿ ಕಟ್ಟಿರತಕ್ಕ ಮನೆಗಳ ಸಂಖ್ಯೆ 316 ಮಾತ್ರ. ಆದುದರಿಂದ ಉತ್ತರದಲ್ಲಿ 'no' ಎಂದು ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಯಾವ ಕಾರಣದಿಂದ ಆ ಮನೆಗಳನ್ನು ಕೆಡವಬೇಕು ಎಂದು ಸರ್ಕಾರದವರು ಉದ್ದೇಶಪಟ್ಟಿದ್ದಾರೆ?

ಶ್ರೀ ಟಿ. ಚನ್ನಯ್ಯ.—Unauthorised Construction ಆಗಿರುವುದರಿಂದ ಹಾಗೆ ಮಾಡಲಾಗಿದೆ.

Mr. SPEAKER.—That is the same question which has been disallowed.

ಶ್ರೀ ಎಸ್. ಗೋಪಾಲಗೌಡ.—ಈ ಸ್ಥಳವನ್ನು acquire ಮಾಡಬೇಕೆಂದು ಸರಕಾರದವರಿಗೆ ಪೌರಸಭೆಯವರು ಬರೆದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಬರೆದಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ವರ್ಷಗಳಿಂದ ಸರ್ಕಾರಕ್ಕೂ ಪೌರಸಭೆಗೂ ಮತ್ತೆ ವ್ಯವಹಾರ ನಡೆಯುತ್ತಿದೆ ?

ಶ್ರೀ ಟಿ. ಚನ್ನಯ್ಯ.—1948-49ನೇ ಇಸವಿಲಾಗಾಯಿತು ವ್ಯವಹಾರ ನಡೆಯುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರಿಗೂ ಪೌರಸಭೆಯವರಿಗೂ ಬಂದಿರತಕ್ಕಂಥ ಭಿನ್ನಾಭಿಪ್ರಾಯ ಯಾವ ಅಂಶದಮೇಲೆ ?

ಶ್ರೀ ಟಿ. ಚನ್ನಯ್ಯ.—ಭಿನ್ನಾಭಿಪ್ರಾಯವೇನೂ ಇಲ್ಲ. ಎಷ್ಟು ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೋ ಅಷ್ಟು ಅನಧಿಕೃತವಾಗಿ ಕಟ್ಟಿಕೊಂಡ ಮನೆಗಳ ಜಾಗವನ್ನು acquire ಮಾಡಿ ಮನೆಗಳನ್ನು ಕಟ್ಟಿಕೊಳ್ಳತಕ್ಕ ವ್ಯವಸ್ಥೆಮಾಡಬೇಕಾಗಿದೆ. ಅದಕ್ಕಾಗಿ ರೆವಿನ್ಯೂ ಕಮಿಷನರ್‌ರವರು ಅಲ್ಲಿಗೆ ಹೋಗಿ Local Self-Government ಕಮಿಷನರವರಿಗೆ ರಿಪೋರ್ಟು ಕಳುಹಿಸಿ ಕೊಟ್ಟಿದ್ದಾರೆ. ಅದನ್ನು ಅವರು Inspectionಗೆ ಇಟ್ಟುಕೊಂಡು ಜಾಗ್ರತೆ ತೀರ್ಮಾನ ಮಾಡುತ್ತಾರೆಂದು ಸರಕಾರಕ್ಕೆ ವರದಿ ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಒಂದೊಂದು ಸೈಟಿಗೆ 1,000 ರೂಪಾಯಿಗಳು ಕೊಡಬೇಕು ಎಂದು ಷರತ್ತು ಹಾಕಿರುವುದರಿಂದ ಪೌರಸಭೆಯವರು ಸಾಧ್ಯವಾಗದೆ ಸ್ಥಳ acquire ಆಗದೆ ಹಾಗೆಯೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಸರ್ಕಾರದ ಗಮನಕ್ಕೆ ಬಂದಿಲ್ಲ; ಅದನ್ನು ನೋಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಇನ್ನು ಕಾಲ ವಿಳಂಬಮಾಡದೆ ಈ ವಿಷಯವನ್ನು ಸರ್ಕಾರದವರು ಕೂಡಲೆ ಪರಿಶೀಲನೆಮಾಡಿ ಕಟ್ಟಿರುವ ಮನೆಗಳನ್ನು ಕೆಡವಿಸುವುದಕ್ಕೆ ಅವಕಾಶಕೊಡದೆ regularise ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—Local Self-Government Commissioner ಹೋಗಿ ನೋಡಿ ಅಜಮಾಯಿಷಿ ಮಾಡಿದನಂತರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

Vacant Land between Rajamahal-Guttahalli and Venkatarangapuram (acquisition of land for Play ground).

Q.—882. Sri V. R. NAIDU (Malleswaram).—

Will the Government be pleased to state:—

whether they intend to acquire the vacant land lying between Rajamahal-Guttahalli and Venkatarangapuram, belonging to Sri Lakshmikantharaj Urs, and give the same for playground for the use of the residents of that locality ?

A.—Sri T. CHANNIAH (Minister for Public Health and Local Self-Government).—

So far there is no representation from any one to acquire that area for a playground. Should the necessity to acquire the land arise the question will be considered by the Corporation of the City of Bangalore.

ಶ್ರೀ ವಿ. ಆರ್. ನಾಯ್ಡು.—ಜನಗಳ ಕಷ್ಟ ಸುಖಗಳನ್ನು ನೋಡುವುದು ಸರ್ಕಾರದ್ದೋ ಅಥವಾ ಜನಗಳದ್ದೋ ?

ಅಧ್ಯಕ್ಷರು.—ಅದು ಸರ್ಕಾರದ್ದೇ ಎಂಬುದು ಗೊತ್ತು.

ಶ್ರೀ ವಿ. ಆರ್. ನಾಯ್ಡು.—ರಾಜಾಮಹಲ್ ಗುಟ್ಟಹಳ್ಳಿ ಮತ್ತು ವೆಂಕಟರಂಗಪುರಂ ಇವುಗಳ ಮಧ್ಯದಲ್ಲಿರುವ ಶ್ರೀ ಲಕ್ಷ್ಮೀಕಾಂತರಾಜ್ ಅರಸಿನವರಿಗೆ ಸೇರಿದ ಖಾಲಿ ಜಮೀನನ್ನು ಸರ್ಕಾರದವರು ಅಕ್ವೈರು ಮಾಡಿಕೊಂಡು ಅದನ್ನು ಅಲ್ಲಿನ ಜನಗಳಿಗೆ ಆಟದ ಮೈದಾನವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಕೊಡುವ ಉದ್ದೇಶವಿದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ ಯಾರಿಂದಲೂ ಮನವಿಗಳು ಬಂದಿಲ್ಲ ಎಂದು ದಯಪಾಲಿಸಿದ್ದೀರಿ. ಜನರು ಸರ್ಕಾರಕ್ಕೆ 101 ಅರ್ಜಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ, ಸರ್ಕಾರದವರು ಅರ್ಜಿಗಳು ಬಂದಿಲ್ಲವೆಂದು ಹೇಳುತ್ತಾರೆ. ಜನಗಳ ಕಷ್ಟ ಸುಖಗಳನ್ನು ವಿಚಾರಿಸುವುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ಜಮೀನು ಕಾರ್ಪೊರೇಷನ್‌ಗೆ ಸಂಬಂಧಿಸಿದುದು, ಆದ್ದರಿಂದ ಕಾರ್ಪೊರೇಷನ್‌ರವರಿಗೆ playground ಗಾಗಿ ಆ ಜಮೀನನ್ನು ಕೊಡಬೇಕೆಂಬುದಾಗಿ ಕೇಳಿಕೊಂಡರೆ, ಅವರು ಅದನ್ನು consider ಮಾಡಿ ಸರ್ಕಾರಕ್ಕೆ ಶಿಫಾರಸು ಕಳುಹಿಸಿದರೆ, ಆಗ ಸರ್ಕಾರದವರು ಆಲೋಚನೆ ಮಾಡುತ್ತಾರೆ. ಸರ್ಕಾರಕ್ಕೆ ಯಾವ ಶಿಫಾರಸ್ಸೂ ಕಾರ್ಪೊರೇಷನ್ನಿನಿಂದ ಇಲ್ಲಿಯತನಕ ಬಂದಿಲ್ಲ.

ಶ್ರೀ ವಿ. ಆರ್. ನಾಯ್ಡು.—ರಾಜಾಮಹಲ್ ಗುಟ್ಟಹಳ್ಳಿ ಮತ್ತು ವೆಂಕಟರಂಗಪುರಂ, ಈ ಸ್ಥಳಗಳಲ್ಲಿ ಹೆಚ್ಚಾಗಿ ಬಡವರೂ ಮತ್ತು ಕಾರ್ಮಿಕರೂ ವಾಸ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನಮ್ಮ ದೇಶದಲ್ಲಿ ಬಹುಭಾಗದ ಜನ ಬಡವರು ಎಂಬುದು ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ವಿ. ಆರ್. ನಾಯ್ಡು.—ಶ್ರೀ ಲಕ್ಷ್ಮೀಕಾಂತ ರಾಜ್ ಅರಸ್‌ರು ಯಾರು ?

Mr. SPEAKER.—That does not arise.

ಶ್ರೀ ವಿ. ಆರ್. ನಾಯ್ಡು.—ಈ ಜಮೀನು ಶ್ರೀ ಲಕ್ಷ್ಮೀಕಾಂತರಾಜ್ ಅರಸಿನವರದು ಎಂದು ಹೇಳುವುದಕ್ಕೆ ದಾಖಲೆ ಏನು ಇದೆ ?

ಅಧ್ಯಕ್ಷರು.—Corporationನವರು proposal ಕಳುಹಿಸಿದರೆ ನೋಡುತ್ತೇವೆ ಎಂದು ಹೇಳಿದ್ದಾರೆ.